1889ನೇ ಇಸವಿ 18ನೇ ಏಪ್ರೆಲ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಣ ತಾಲ್ಲೂಕಿನಲ್ಲಿ. ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು, ಚನ್ನರಾಯಪಟ್ಣ ತಾಲ್ಲೂಕು ಕಜೇರಿಯಲ್ಲಿ ಸ್ಯ 1889ನೇ ಇಸವಿ ಮೇ ತಾರೀಖು 27ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಡದರಬಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತರ ಖಾಯಮ್ಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ಯ 1890ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಇಡಬೇಕ್ಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ವಟ್ಟು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಟೋಕಲಸೆಸ್ ಪೇಬೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜಿನ ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು ಇಜಾರೆದಾರನಿಗೆ ಮಾರಬೇಕೇ ಹೊರತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರೆದಾರನು ಹುಲ್ಲುಬನ್ನೀ ಇಜಾರೆದಾರರ ಚರಾವು ಹತ್ತಿರನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮೀನುಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಳದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನು ಅಗಿಯಕೂಡದು. ವೊಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಿಕ ಇರುವ ಹಾಗೆ ಮಾಡಬೇಕು.

ಪಿ. ಎನ್. ಪೂರ್ಣಯ್ಯ, ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 15ನೇ ಏಪ್ರೆಲ್ 1889.

ಚನ್ನಗಿರೀ ತಾಲ್ಲೂಕು ಕುಕ್ಕವಾಡ ವುಬ್ರಾಣೀ ಸ್ಟೇಟ್‌ಫಾರೆಸ್ಟ್ ಡಿವಾರ್‌ಕೇಷರ್ ಲೈನ್‌ಮೇಲೆ ಕಡಿಸಿದ ಸಾಗವಾನಿ ಮತ್ತು ಕಾಡು ಜಾತೀ ಮರಗಳು ಈ ಕೆಳಗೆ ನಮೂದಿಸಿಯಿರುವ ಗ್ರಾಮಗಳಲ್ಲಿ ಅವುಗಳ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರ್.	ಗ್ರಾಮದ ಹೆಸರು.	ತಾಲ್ಲೂಕು.	ಹರಾಜ್ ತಾರೀಖು.	ಷರಾ.
1	ಮಾವಿನಹೊಳೆ ..	ಚನ್ನಗಿರಿ	15ನೇ ಮೇ 1889	ಹೊಳಲ್ಕೆರೆ ರೈಲ್ವೆಸ್ಟೇಷನಿನಿಂದ ಸುಮಾರು 20 ಮೈಲ್ ಆಗುತ್ತದೆ ಭಂಡಿದಾರಿ ಇರುತ್ತದೆ.
2	ಜೋಳದಹಾಳು ..	ಡಿಟೋ	17ನೇ ಡಿಟೋ	
3	ದಾನವಾಡಿ ..	ಶಿವಮೊಗ್ಗಾ	19ನೇ ಡಿಟೋ	
4	ಗಂಗೂರು ..	ಡಿಟೋ	21ನೇ ಡಿಟೋ	
5	ಹಾದೀಕೆರೆ ..	ತರೀಕೆರೆ	23ನೇ ಡಿಟೋ	ಅಜ್ಜಂಪುರದ ರೈಲ್ವೆಸ್ಟೇಷನಿನಿಂದ ಸುಮಾರು 10 ಮೈಲ್ ಆಗುತ್ತದೆ ಭಂಡಿದಾರಿ ಇರುತ್ತದೆ.
6	ವಿಟ್ಲಾಪುರ ..	ಡಿಟೋ	25ನೇ ಡಿಟೋ	
7	ವುಬ್ರಾಣಿ ..	ಚನ್ನಗಿರಿ	27ನೇ ಡಿಟೋ	ಶಿವನೇ ಸ್ಟೇಷನಿನಿಂದ 12 ಮೈಲ್ ಇರುತ್ತದೆ
8	ಮಳಲ್‌ಭಾವಿ ...	ಡಿಟೋ	29ನೇ ಡಿಟೋ	

ಹರಾಜು ಷರತ್ತುಗಳು—ಸ್ಯ 1887ನೇ ಇಸವಿ ಸಪ್ಟಂಬರ್ 3ನೇ ತಾರೀಖು ನಂಬರ್ 35ನೇ ಮೈಸೂರು ಗೆಜೆಟ್‌ನಲ್ಲಿ ಪ್ರಾಯಿಷ್ ಆದ ಮೇರಿಗೆ ಮತ್ತು ಸದರೀ ನೋಟಿಫಿಕೇಷರ್ ಹರಾಜ್ ಕಾಲದಲ್ಲಿ ನೋಡಲ್ಪಡುತ್ತೆ.

ಇ. ಪಿ. ಲೂಯ್ಸ್, ಅಸಿಸ್ಟೆಂಟ್ ಕಲೆಕ್ಟರ್‌ವೇಟರ್.